
# ಕನ್ನಡ ವೇದಾಂತ ಕೃತಿಯ ವಿವರಣೆ – 'ಬ್ರಹ್ಮಯಾನ'

ಕನ್ನಡದಲ್ಲಿ ಅನುಭಾವಿ ಮಹಲಿಂಗರಂಗನು ಬರೆದ 'ಅನುಭವಾಮೃತ' ಎಂಬ ಅದ್ವೈತ ವೇದಾಂತ ಕೃತಿಯ ವಿವರಣೆಯನ್ನೊಳಗೊಂಡ ಬೃಹತ್ ಗ್ರಂಥವೇ **'ಬ್ರಹ್ಮಯಾನ'** ಎಂಬ ಹೆಸರಿನಲ್ಲಿ ಪ್ರಕಟಗೊಂಡಿದೆ. ಲೇಖಕರು ಶಾಸ್ತ್ರಚೂಡಾಮಣಿ ಬಿರುದಿಗೆ ಪಾತ್ರರಾದ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯದ ಪ್ರಥಮ ಕುಲಪತಿಗಳಾಗಿದ್ದ ಪ್ರೊ . ಮಲ್ಲೇಪುರಂ ಜಿ. ವೆಂಕಟೇಶ ಅವರು. ಮೂಲತಃ ಇದು 'ವಿಜಯವಾಣಿ' ಪತ್ರಿಕೆಯಲ್ಲಿ ಪ್ರಕಟವಾದ ಅಂಕಣ ಬರಹಗಳ ಸಂಕಲನವಾಗಿದೆ.

ಷಟ್ಪದಿ ಪದ್ಯರೂಪದಲ್ಲಿ ವೇದಾಂತ ತತ್ತ್ವಗಳನ್ನು ನಿರೂಪಿಸಿರುವ ಕನ್ನಡ ಕಾವ್ಯ ಗ್ರಂಥವೇ 'ಅನುಭವಾಮೃತ'. ೧೭ನೇ ಶತಮಾನದಲ್ಲಿ ಆಗಿಹೋದ ಕವಿ ಮಹಲಿಂಗರಂಗನು ರಚಿಸಿದ ಈ ಕೃತಿಯ ಹೆಗ್ಗಳಿಕೆ ಹೀಗಿದೆ: 'ಕನ್ನಡನಾಡಿನಲ್ಲಿ ಕಳೆದ ಎರಡುನೂರು ವರ್ಷಗಳಲ್ಲಿ ಮನೆಮನೆಗಳಲ್ಲೂ ಇದರ ಓದು ಸಾಗುತ್ತಿತ್ತು .' ಈ ಮೊದಲೇ ಅನುಭವಾಮೃತ ಗ್ರಂಥದ ಬಗೆಗಿನ ಅಂಕಣ ಬರಹಗಳನ್ನು ಮೂಲ ಗ್ರಂಥದ ಮೊದಲ ಎರಡು ಅಧ್ಯಾಯಗಳನ್ನು ಮಾತ್ರ ಒಳಗೊಂಡು 'ಪೂರ್ವ ಯಾನ' ಎಂದೂ, ಮೂರು ಮತ್ತು ನಾಲ್ಕನೇ ಅಧ್ಯಾಯಗಳನ್ನು 'ಮಧ್ಯಯಾನ' ಎಂದೂ, ಕೊನೆಯದಾಗಿ ಐದು, ಆರು, ಏಳನೆಯ ಅಧ್ಯಾಯಗಳನ್ನು ಒಳ ಗೊಂಡ ಬರಗಹಳನ್ನು 'ಉತ್ತರಯಾನ' ಎಂದೂ ಲೇಖಕರು ಪ್ರಕಟಿಸಿದ್ದರು. ಈ ಮೂರೂ ಕೃತಿಗಳನ್ನು ಇಲ್ಲಿ 'ಬ್ರಹ್ಮಯಾನ' ಎಂಬ ಹೆಸರಿನಲ್ಲಿ ಒಟ್ಟುಮಾಡಿ ಪ್ರಕಟಿಸಲಾಗಿದೆ. ಈ ಮೂಲಕ ಲೇಖಕರ ಬರವಣಿಗೆ, ಚಿಂತನೆಗಳು ಒಂದೆಡೆ ಸಮಗ್ರವಾಗಿ ಲಭಿಸುವಂತಾಗಿದೆ.




**ಕೃತಿ :** ಬ್ರಹ್ಮಯಾನ
**ಲೇಖಕರು :** ಪ್ರೊ . ಮಲ್ಲೇಪುರಂ ಜಿ. ವೆಂಕಟೇಶ
**ಪ್ರಕಾಶನ :** ಉದಯ ಪ್ರಕಾಶನ
ನಂ.984, 11ನೇ 'ಎ' ಮುಖ್ಯರಸ್ತೆ, 3ನೇ ವಿಭಾಗ, ರಾಜಾಜಿನಗರ, ಬೆಂಗಳೂರು – 560 010
ದೂ.: 080–2338 9143
**ಬೆಲೆ:** 700 / – **ಪುಟ:** 704

ಈ ಕಾವ್ಯದ ಚೌಕಟ್ಟಿನ ಬಗ್ಗೆ ಲೇಖಕರು ವಿವರಿಸುತ್ತಾರೆ: ''ಮಹಲಿಂಗರಂಗನ ಅನುಭವಾಮೃತ ಕಾವ್ಯವು ಸಂವಾದ ಶೈಲಿಯಲ್ಲಿದೆ. ವ್ಯಾಸಮುನಿಯು ಮಗ ಶುಕ ನಿಗೆ 'ಬ್ರಹ್ಮವಿದ್ಯೆ'ಯನ್ನು ಹೇಳುವಂತೆ ಇಲ್ಲಿ ಚಿತ್ರಿತವಾಗಿದೆ.. ಈ ಗ್ರಂಥವು ಬಲು ಸರಳವಾಗಿದೆ. ವೇದಾಂತ ವಿಚಾರ ಬಹಳ ಗಹನವಾದುದಷ್ಟೆ. ಅದನ್ನು ಕನ್ನಡದಲ್ಲಿ ಹೇಳುವ ತವಕ ಮಹಲಿಂಗರಂಗನದು. ಅವನ ಮಾತಿನಲ್ಲಿಯೇ ಸಂಗ್ರಹಿಸಿ ಹೇಳ ಬಹುದಾದರೆ: ವೇದಾಂತದ ಅರ್ಥವನ್ನು ಯುಕ್ತಿಯಿಂದ ಹೇಳಬೇಕು. ವಿಶಾಲ ವಾದ ವೇದಾಂತದ ಅರ್ಥವನ್ನು ಸಂಗ್ರಹಿಸಿ ಹೇಳಬೇಕಾಗುತ್ತದೆ. ಇದು ಎಲ್ಲರಿಗೂ ತಿಳಿಯುವಂತಿರಬೇಕು. ಅದು ಸುಲಭವಾಗಿಯೂ ಇರಬೇಕು... ಇಂಥ ಬ್ರಹ್ಮ ಜ್ಞಾನವನ್ನು ಎಲ್ಲರೂ ತಿಳಿಯಬೇಕೆನ್ನುವುದು ಮಹಲಿಂಗರಂಗನ ಅಪೇಕ್ಷೆ.. ಮಹಲಿಂಗರಂಗನು ವ್ಯಾಸ–ಶುಕಮುನಿಗಳ ಸಂವಾದದ ಪರಿವೇಷದಲ್ಲಿ ಅತ್ಯಂತ ಗಹನವಾದ 'ಅಧ್ಯಾತ್ಮಸಾರ'ವನ್ನು ಸುಬೋಧಗೊಳ್ಳುವಂತೆ ಹೇಳುತ್ತಾನೆ. ಎಂಥ ಮಂದಬುದ್ಧಿಯುಳ್ಳವರ ಚಿತ್ತಕ್ಕೆ ಹೊಗುವಂತೆ ಹೇಳುವುದೊಂದು ಕಲೆಯೇ ಹೌದು! ಇಂಥ ಕಲೆಯು ಸಂವಾದರೂಪದಿಂದಾಗಿ ಹೆಚ್ಚು ಮನನೀಯವಾಗುತ್ತದೆ! ''

ಇಲ್ಲಿನ ವಿವರಣೆ ಎಂತಹದು ಎಂಬುದಕ್ಕೆ ಒಂದು ಉದಾಹರಣೆ: ''ರತ್ನಮಯವಹ ಕೊಡದೊಳಗೆ ತೋ/ರುತ್ತಲಿಹ ದೀಪ ಪ್ರಕಾಶವು/ಸುತ್ತಲೆಲ್ಲಾ ಒಳಹೊರಗೆ ಬೆಳಗುತ್ತಲಿರ್ಪಂತೆ// ತತ್ತ್ವಮಯವಹ ದೇಹದೊಳು ಹೊರ/ಗೆತ್ತ ನೋಡಲು ಥಳಥಳಿಸಿ ಬೆಳ/ಗುತ್ತಲಿಹ ಚಿಜ್ಜ್ಯೋತಿಯೇ ನೀನೆಂದು ನಿಶ್ಚಯಿಸು// ೩.೮೬// – ರತ್ನಮಯವಾದ ಕೊಡ ಒಂದುಂಟು. ಅದು ರತ್ನಮಯವೇ ಆಗಿರು ವುದರಿಂದ ಅದರಲ್ಲಿ ಎಲ್ಲವೂ ಪ್ರತಿಫಲಿತವಾಗುವುದು ಸಹಜ. ಅದು ಬೆಳಗಿ ಸುತ್ತೆಲ್ಲವನ್ನೂ ಬೆಳಗಿಸುತ್ತದೆ. ಕೊಡದೊಳಗಿರುವ ದೀಪವು ಸುತ್ತ–ಮುತ್ತೆಲ್ಲ ಬೆಳಕನ್ನೆ ಹರಡುತ್ತದೆ. ಅದು ಬೆಳಕನ್ನು ಹರಡದೆ ಸುಮ್ಮನಿರಲಾರದು. ಈ ದೇಹವು ಪಂಚಭೂತಗಳಿಂದ ಕೂಡಿರುವುದು ಸರಿಯಷ್ಟೆ. ಈ ದೇಹದಲ್ಲಿ ಎತ್ತ ನೋಡಿದರೂ ಥಳಥಳಿಸಿ ಚಿಜ್ಜ್ಯೋತಿಯೇ ಬೆಳಗುತ್ತದೆ. ಆ ಚಿಜ್ಜ್ಯೋತಿಯೇ 'ನೀನು' ಎಂದು ತಿಳಿಯಬೇಕು.'' (ಪು. ೨೪೯). ಈ ರೀತಿ ಸರಳ ಕಾವ್ಯಕ್ಕೆ ರಸವತ್ತಾದ ವಿವರಣೆ ಇಲ್ಲಿದೆ. ಹಲವೆಡೆ ಹೆಚ್ಚಿನ ಮಾಹಿತಿಗಾಗಿ ವಿವೇಕ ಚೂಡಾ ಮಣಿ, ಗೀತೆ, ಪಂಚದಶೀ ಮುಂತಾದ ಗ್ರಂಥಗಳನ್ನೂ ಉದ್ಧರಿಸಲಾಗಿದೆ. ಒಟ್ಟಿನಲ್ಲಿ ಕನ್ನಡ ವೇದಾಂತ ಕೃತಿಯೊಂದರ ಚಿಂತನಪರ ವಿವರಣೆ ಇಲ್ಲಿದೆ. ವೇದಾಂತ ತತ್ತ್ವಗಳನ್ನು ಅಭ್ಯಸಿಸುವ ಆಸಕ್ತರಿಗೆ ಈ ಬೃಹತ್ ಗ್ರಂಥವು ಅತ್ಯಂತ ಉಪಯುಕ್ತವಾಗುತ್ತದೆ.